# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಕೆ ಎಸ್ ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **275** |
| **ಉತ್ತರಿಸಬೇಕಾದ ದಿನಾಂಕ** | : | **18-08-2026** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಸಹಕಾರ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), ಡಿಸಿಸಿ ಬ್ಯಾಂಕ್‌ಗಳು ಹಾಗೂ ವಿವಿಧ ಸಹಕಾರ ಸಂಸ್ಥೆಗಳ ಮೂಲಕ ರಾಜ್ಯದ ರೈತರಿಗೆ ವಿತರಿಸಲಾದ ಒಟ್ಟು ಸಾಲದ ಮೊತ್ತವೆಷ್ಟು, (ವರ್ಷವಾರು ವಿವರ ನೀಡುವುದು); | 2023-24, 2024-25 ಹಾಗೂ 2025-26ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು (ಡಿಸಿಸಿ) ಹಾಗೂ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಕಾರ್ಡ್) ಮೂಲಕ ರಾಜ್ಯದ ರೈತರಿಗೆ ವಿತರಿಸಲಾದ ಕೃಷಿ ಸಾಲದ ವರ್ಷವಾರು ವಿವರ ಈ ಕೆಳಗಿನಂತೆ ನೀಡಲಾಗಿದೆ. |

(ರೂ.ಕೋಟಿಗಳಲ್ಲಿ)

| ಸಹಕಾರ ಸಂಸ್ಥೆಗಳ ವಿಧ | 2023-24 | | 2024-25 | | 2025-26 | |
|---|---|---|---|---|---|---|
| | ರೈತರ ಸಂಖ್ಯೆ | ಸಾಲದ ಮೊತ್ತ | ರೈತರ ಸಂಖ್ಯೆ | ಸಾಲದ ಮೊತ್ತ | ರೈತರ ಸಂಖ್ಯೆ | ಸಾಲದ ಮೊತ್ತ |
| ಡಿಸಿಸಿ ಬ್ಯಾಂಕುಗಳು ಹಾಗೂ ಪ್ಯಾಕ್ಸ್ (ಅಲ್ಪಾವಧಿ ಹಾಗೂ ಮಧ್ಯಮಾವಧಿ) | 28,50,533 | 23,767.62 | 28,59,729 | 25,060.18 | 28,73,596 | 26,062.38 |
| ಪಿಕಾರ್ಡ್ ಬ್ಯಾಂಕ್ ಮೂಲಕ (ದೀರ್ಘಾವಧಿ) | 16,382 | 589.09 | 21,986 | 541.15 | 19,598 | 506.34 |

ಆ) ಇದರಲ್ಲಿ ಸಣ್ಣ ರೈತರಿಗೆ (ರೂ. 1.00 ಲಕ್ಷದವರೆಗೆ ಸಾಲ ಪಡೆದವರಿಗೆ) ವಿವಿಧ ಕೃಷಿ ಚಟುವಟಿಕೆಗಳಿಗಾಗಿ ವಿತರಿಸಲಾದ ಸಾಲದ ಮೊತ್ತವೆಷ್ಟು; (ವರ್ಷವಾರು ವಿವರ ನೀಡುವುದು);

ಸಹಕಾರ ಸಂಸ್ಥೆಗಳು ವಿತರಿಸಿದ ಒಟ್ಟು ಸಾಲದ ಪೈಕಿ ಸಣ್ಣ ರೈತರಿಗೆ ರೂ.1.00 ಲಕ್ಷಗಳವರೆಗೆ ವಿತರಿಸಲಾದ ಕೃಷಿ ಸಾಲದ ವರ್ಷವಾರು ವಿವರ ಈ ಕೆಳಗಿನಂತೆ ನೀಡಲಾಗಿದೆ.

(ರೂ.ಕೋಟಿಗಳಲ್ಲಿ)

| ಸಹಕಾರ ಸಂಸ್ಥೆಗಳ ವಿಧ | 2023-24 | | 2024-25 | | 2025-26 | |
|---|---|---|---|---|---|---|
| | ರೈತರ ಸಂಖ್ಯೆ | ಸಾಲದ ಮೊತ್ತ | ರೈತರ ಸಂಖ್ಯೆ | ಸಾಲದ ಮೊತ್ತ | ರೈತರ ಸಂಖ್ಯೆ | ಸಾಲದ ಮೊತ್ತ |
| ಡಿಸಿಸಿ ಬ್ಯಾಂಕುಗಳು ಹಾಗೂ ಪ್ಯಾಕ್ಸ್‌ಗಳ ಮೂಲಕ | 18,53,639 | 11,519.14 | 18,94,198 | 11,665.00 | 18,94,174 | 11,852.86 |
| ಪಿಕಾರ್ಡ್ ಬ್ಯಾಂಕ್ ಮೂಲಕ | 2086 | 51.40 | 2236 | 29.66 | 2492 | 27.75 |

ಇ) ಪ್ರಸ್ತುತ ರಾಜ್ಯದಲ್ಲಿರುವ ಬರಗಾಲದ ಹಿನ್ನೆಲೆಯಲ್ಲಿ, ಸಹಕಾರ ಇಲಾಖೆ/ಸಂಸ್ಥೆಗಳ ಮೂಲಕ ರೈತರು ಪಡೆದಿರುವ ಕೃಷಿ ಸಾಲವನ್ನು ಮನ್ನಾ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಸಹಕಾರ ಸಂಸ್ಥೆಗಳ ಮೂಲಕ ರೈತರು ಪಡೆದಿರುವ ಕೃಷಿ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆದರೆ ಬರ ಉಂಟಾಗುವ ಹಿನ್ನೆಲೆಯಲ್ಲಿ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಎಲ್-ನಿನೋ (El-Nino) ಪ್ರಭಾವ ಹೆಚ್ಚಾಗುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ, ಬೆಳೆ ಸಾಲದ ಹೊರಬಾಕಿ (Outstanding) ಹೊಂದಿರುವ ಎಲ್ಲಾ ರೈತರೂ ಬೆಳೆ ವಿಮೆ ಯೋಜನೆಯ ವ್ಯಾಪ್ತಿಗೆ ಒಳಪಡುವಂತೆ ಮನ ಒಲಿಸಿ ಸಹಕಾರ ಸಂಘಗಳ ನಿಬಂಧಕರಿಂದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ದಿನಾಂಕ:18-06-2026 ಮತ್ತು ದಿನಾಂಕ:13-07-2026 ರಂದು ಸೂಚನೆ ನೀಡಲಾಗಿದೆ. ದಿನಾಂಕ:12-08-2026 ರವರೆಗೆ 7,20,893 ರೈತರು ಬೆಳೆ ವಿಮೆ ಯೋಜನೆಯಡಿಯಲ್ಲಿ ನೋಂದಣಿಯಾಗಿರುತ್ತಾರೆ.
2. ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳನ್ವಯ ಬರ ಘೋಷಣೆಯಾಗಿ ಬೆಳೆ ಇಳುವರಿ ನಷ್ಟದ ಪ್ರಮಾಣ ಶೇ.33 ಕ್ಕಿಂತ ಹೆಚ್ಚಿಗೆ ಇದ್ದಲ್ಲಿ, ಸಹಕಾರ ಸಂಸ್ಥೆಗಳು ರೈತರ ಸಾಲದ ಕಂತುಗಳನ್ನು 2 ರಿಂದ 5 ವರ್ಷಗಳ ಅವಧಿಗೆ ಮುಂದೂಡಲು ಅವಕಾಶ ಇರುತ್ತದೆ.

| | | |
|---|---|---|
| ಈ) | ರಾಜ್ಯದಲ್ಲಿ ಸಹಕಾರ ಇಲಾಖೆಯ ಮೂಲಕ ರೈತರಿಗೆ ನೀಡಿರುವ ಕೃಷಿ ಸಾಲದ ಒಟ್ಟು ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು). | ದಿನಾಂಕ: 31-07-2026 ರ ಅಂತ್ಯಕ್ಕೆ ಸಹಕಾರ ಸಂಸ್ಥೆಗಳ ಮೂಲಕ 33,07,384 ರೈತರಿಂದ ರೂ.31,028.58 ಕೋಟಿಗಳ ಕೃಷಿ ಸಾಲದ ಹೊರಬಾಕಿ ಇದ್ದು, ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |

**ಕಡತ ಸಂಖ್ಯೆ: ಸಿಒ 236 ಸಿಎಲ್ಎಸ್ 2026**

**(ಲಕ್ಷ್ಮಣ ಎಸ್. ಸವದಿ)**
ಸಹಕಾರ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 275 ಕ್ಕೆ ಅನುಬಂಧ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಡಿಸಿಸಿ ಬ್ಯಾಂಕುಗಳು ಹಾಗೂ ಪಿಕಾರ್ಡ್ ಬ್ಯಾಂಕುಗಳಲ್ಲಿ ದಿ.31-07-2026 ಕ್ಕೆ ಇದ್ದಂತೆ ರೈತರು ಪಡೆದ ಕೃಷಿ ಸಾಲದ ಹೊರಬಾಕಿ ವಿವರ (ರೂ.ಕೋಟಿಗಳಲ್ಲಿ)

| ಕ್ರ.ಸಂ. | ಜಿಲ್ಲೆಯ ಹೆಸರು | ಅಲ್ಪಾವಧಿ ಕೃಷಿ ಸಾಲ (ಡಿಸಿಸಿ ಬ್ಯಾಂಕ್/ಪ್ಯಾಕ್ಸ್) | | ಮಧ್ಯಮಾವಧಿ ಕೃಷಿ ಸಾಲ (ಡಿಸಿಸಿ ಬ್ಯಾಂಕ್/ಪ್ಯಾಕ್ಸ್) | | ದೀರ್ಘಾವಧಿ ಕೃಷಿ ಸಾಲ (ಪಿಕಾರ್ಡ್ ಬ್ಯಾಂಕ್) | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಬೆಳಗಾವಿ | 496354 | 3783.31 | 1988 | 65.81 | 5072 | 103.96 |
| 2 | ವಿಜಯಪುರ | 251290 | 1966.77 | 5393 | 190.36 | 4162 | 104.41 |
| 3 | ಬಾಗಲಕೋಟೆ | 216588 | 1346.02 | 6439 | 212.99 | 4275 | 87.89 |
| 4 | ಧಾರವಾಡ | 28404 | 221.49 | 901 | 35.39 | 2663 | 42.97 |
| 5 | ಗದಗ | 44550 | 249.83 | 2607 | 105.10 | 1867 | 28.80 |
| 6 | ಹಾವೇರಿ | 29759 | 213.85 | 1656 | 54.76 | 3768 | 59.40 |
| 7 | ಉತ್ತರ ಕನ್ನಡ | 90170 | 1078.15 | 42220 | 774.77 | 14964 | 84.44 |
| 8 | ಬೀದರ | 151911 | 821.52 | 8470 | 51.22 | 1887 | 41.49 |
| 9 | ಕಲಬುರಗಿ | 145666 | 702.00 | 655 | 24.14 | 2051 | 33.12 |
| 10 | ಯಾದಗಿರ | 51205 | 220.99 | 36 | 1.72 | 1019 | 28.38 |
| 11 | ರಾಯಚೂರು . | 66218 | 478.83 | 900 | 23.56 | 2177 | 28.98 |
| 12 | ಕೊಪ್ಪಳ | 38499 | 256.33 | 199 | 5.69 | 1605 | 29.55 |
| 13 | ಬಳ್ಳಾರಿ | 41278 | 400.87 | 1963 | 34.37 | 4353 | 77.66 |
| 14 | ವಿಜಯನಗರ | 76051 | 682.39 | 2091 | 36.60 | | |
| 15 | ಮೈಸೂರು | 96237 | 1009.29 | 3981 | 52.57 | 8098 | 82.25 |
| 16 | ಚಾಮರಾಜನಗರ | 38759 | 346.88 | 506 | 4.69 | 2650 | 24.75 |
| 17 | ಮಂಡ್ಯ | 151468 | 1091.73 | 3255 | 39.26 | 4603 | 57.49 |
| 18 | ಹಾಸನ | 179426 | 1260.17 | 3304 | 324.56 | 8535 | 73.03 |
| 19 | ಚಿಕ್ಕಮಗಳೂರು | 52075 | 749.95 | 29 | 0.73 | 14013 | 139.24 |
| 20 | ಕೊಡಗು | 30283 | 773.95 | 7259 | 208.27 | 3975 | 68.36 |
| 21 | ದಕ್ಷಿಣ ಕನ್ನಡ | 102383 | 1987.60 | 56882 | 1157.51 | 7344 | 63.88 |
| 22 | ಉಡುಪಿ | 44348 | 664.99 | 11851 | 191.88 | 2467 | 20.82 |
| 23 | ಬೆಂಗಳೂರು ನಗರ | 10123 | 145.20 | 42 | 1.95 | 512 | 15.36 |
| 24 | ಬೆಂಗಳೂರು ಗ್ರಾಮಾಂತರ | 31676 | 253.89 | 251 | 16.94 | 930 | 30.64 |
| 25 | ಬೆಂಗಳೂರು ದಕ್ಷಿಣ | 66516 | 487.06 | 589 | 37.50 | 1436 | 23.84 |

| | | | | | | | |
|---|---|---|---|---|---|---|---|
| 26 | ಕೋಲಾರ | 18921 | 234.39 | 1287 | 29.45 | 2010 | 42.12 |
| 27 | ಚಿಕ್ಕಬಳ್ಳಾಪುರ | 32970 | 407.22 | 162 | 8.90 | 3052 | 53.37 |
| 28 | ತುಮಕೂರು | 145086 | 738.23 | 1279 | 75.58 | 5744 | 76.67 |
| 29 | ಚಿತ್ರದುರ್ಗ | 64730 | 528.06 | 4434 | 142.59 | 2006 | 32.89 |
| 30 | ದಾವಣಗೆರೆ | 107214 | 921.55 | 1994 | 81.66 | 3457 | 64.56 |
| 31 | ಶಿವಮೊಗ್ಗ | 101011 | 1158.26 | 668 | 139.21 | 12229 | 97.75 |
| | ಒಟ್ಟು | **3001169** | **25180.77** | **173291** | **4129.73** | **132924** | **1718.08** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)

14/8/26